

ಚಿತ್ರ: ಸ್ಪಿಕ್‌ಮೆಕೆ

# ಶುಭೇಂದ್ರ ಸಿತಾರ್ ಪ್ರೀತಿ!

ಪ್ರತಿಭಾನ್ವಿತ ಸಿತಾರ್ ವಾದಕ ಪಂ. ಶುಭೇಂದ್ರ ರಾವ್ ಮೂಲತಃ ಬೆಂಗಳೂರಿನವರು. ಸಿತಾರ್ ನಾದದ ಮೂಲಕ ವಿಶ್ವವೇದಿಕೆಗಳಲ್ಲಿ ಛಾಪು ಮೂಡಿಸಿರುವ ಅವರು, ಸಿತಾರ್ ನುಡಿಸಾಣಿಕೆಯ ತಂತ್ರಗಾರಿಕೆ, ಅಭ್ಯಾಸ, ಯಶಸ್ಸಿನ ಮೆಟ್ಟಿಲುಗಳ ಬಗ್ಗೆ 'ಸುಧಾ' ಜೊತೆಗೆ ಮಾತನಾಡಿದ್ದಾರೆ.

■ ಉಮಾ ಅನಂತ್

ಸಿತಾರ್ ನಾದ ಕಿವಿಗಿಂಪು. ತಂತಿವಾದ್ಯದಲ್ಲಿ ರಾಗಗಳು ದಳದಳವಾಗಿ ಅರಳಿದರೆ ಮನಸ್ಸು ಮುದಗೊಳ್ಳುತ್ತದೆ. ಸಂಗೀತದ ಅಲೆ ನಮ್ಮನ್ನು ಧ್ಯಾನಸ್ಥ ಸ್ಥಿತಿಗೆ ತಲುಪಿಸುತ್ತದೆ. ಸಿತಾರ್ ಭಾರತೀಯ ಮೂಲದ ವಾದ್ಯ, ಜೊತೆಗೆ ತಂತಿವಾದ್ಯಗಳ ತಾಯಿ ವೀಣೆಯ ಮತ್ತೊಂದು ರೂಪ.

ದೇಶದ ಮುಂಚೂಣಿಯಲ್ಲಿರುವ ಸಿತಾರ್ ವಾದಕರಲ್ಲಿ ಪಂ. ಶುಭೇಂದ್ರ ರಾವ್ ಅವರದು ಖ್ಯಾತನಾಮ. ಬಹುಸಂಸ್ಕೃತಿಯ ನಮ್ಮ ನಾಡಿನಲ್ಲಿ ಪಂ. ಶುಭೇಂದ್ರ, ಸಾಂಸ್ಕೃತಿಕ–ಸಂಗೀತ ಸೇತುವೆಯಂತೆ ಕೆಲಸ ಮಾಡುತ್ತಿರುವುದು ಹೆಮ್ಮೆಯ ವಿಚಾರ. ಸಿತಾರ್ ಮಾಂತ್ರಿಕ ಪಂ. ರವಿಶಂಕರ್ ಅವರ ಅಚ್ಚುಮೆಚ್ಚಿನ ಶಿಷ್ಯ ಮಾತ್ರವಲ್ಲ, ಸುಮಾರು ಆರೇಳು ವರ್ಷಗಳ ಕಾಲ ದೆಹಲಿಯಲ್ಲಿ ಅವರ ಬಳಿಯೇ 'ಗುರು–ಶಿಷ್ಯ' ಪರಂಪರೆಯಲ್ಲಿ ಸಿತಾರ್ ನುಡಿಸಾಣಿಕೆಯ ತಂತ್ರಗಾರಿಕೆಯನ್ನು ಕಲಿತವರು. ಅವರ ಜೀವನಶಿಸ್ತನ್ನು, ಸಂಗೀತ ಪ್ರೀತಿಯನ್ನು ತಮ್ಮ ಬದುಕಿನಲ್ಲೂ ಅಳವಡಿಸಿಕೊಂಡವರು.

ಮೂಲತಃ ಬೆಂಗಳೂರಿನವರೇ ಆದ ಪಂ. ಶುಭೇಂದ್ರರಾವ್, ಸಿತಾರ್ ನುಡಿಸುವ ಮೂಲಕ ನಾಡು, ದೇಶ ಮಾತ್ರವಲ್ಲದೆ ಸಾಗರದಾಚೆಯ ಹಲವಾರು ದೇಶಗಳಲ್ಲಿ ಬಹುಬೇಡಿಕೆಯ ಕಲಾವಿದರಾಗಿ ರೂಪುಗೊಂಡವರು. ಸಂಗೀತ ಮನೆತನದಲ್ಲೇ ಜನಿಸಿದ ಪಂ. ಶುಭೇಂದ್ರರಾವ್, ತಂದೆ ಪಂ. ಎನ್. ಆರ್. ರಾಮರಾವ್ ಅವರ ಬಳಿಯೇ ಮೊದಲಿಗೆ ಸಿತಾರ್ ಕಲಿತರು. ತಾಯಿ ವಿದುಷಿ ನಾಗರತ್ನ ರಾವ್, ಸರಸ್ವತಿ ವೀಣೆ ನುಡಿಸುವ ಹೆಸರಾಂತ ಕಲಾವಿದೆ.